ಶ್ರೀ ಬಿ. ಹುಚ್ಚೇಗೌಡ:—ಇಂಥದನ್ನು ಬೇಗ ಸರಿಪಡಿಸುವಂತೆ ಮಾಡಲು ತಾವು ಏನಾದರೂ ಹೊಸ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದಿದ್ದೀರಾ ?

Sri H. SIDDAVEERAPPA.—We have already taken interest in it to the extent that we can interfere in the internal management of the concern.

ಶ್ರೀ ಬಿ ಹುಚ್ಚೇಗೌಡ.—ಲೇಬರ್ ಕಮಿಷನರು ಆ ತಾಲ್ಲೂಕಿಗೆ ಹೋಗಿದ್ದಾಗ ಈ ಬಗ್ಗೆ ವಿಚಾರಣೆ ನಡೆಸಿ ಸರ್ಕಾರಕ್ಕೆ ಒಂದು ವರದಿಯನ್ನು ಕಳುಹಿಸಿಲ್ಲವೇ ?

Sri H. SIDDAVEERAPPA.—I want notice. I may say that the Labour Department is at it.

ಶ್ರೀ ಬಿ. ಹುಚ್ಚೇಗೌಡ.—ಅವರು ಕಳುಹಿಸಿದ ವರದಿಯ ಮೇಲೆ ತಾವು ಏನು ಕಾರ್ಯಕ್ರಮವನ್ನು ಕೈಕೊಂಡಿರಿ ?

Sri H. SIDDAVEERAPPA.—I want notice for it.

ಶ್ರೀ ಬಿ. ಹುಚ್ಚೇಗೌಡ.—ಆ ವರದಿಯಲ್ಲಿ ಈ ಜನರ ಪೈಕಿಯಲ್ಲೇ 318 ಜನರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ತಿಳಿಸಿರಲಿಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಅಷ್ಟು ಹೊತ್ತಿಗಾಗಲೇ ಈ ಹೊಸಬರನ್ನು ಕೆಲಸಕ್ಕೆ ನೇಮಿಸಿಕೊಳ್ಳಲಾಗಿತ್ತು.

ಶ್ರೀ ಬಿ. ಹುಚ್ಚೇಗೌಡ.—ಹೀಗೆ ಅವರನ್ನು ಕೆಲಸಕ್ಕೆ ತೆಗೆದುಕೊಳ್ಳದೆ ಕೈಬಿಟ್ಟಿದ್ದು ಅವರಿಗೆ ಅನ್ಯಾಯ ಮಾಡಿದಂತಾಗಿಲ್ಲವೇ ?

Mr. SPEAKER.—The Hon'ble Member had put that question.

Sri B. HUTCHE GOWDA.—I had put that question. But the answer was that it is a joint-stock company and that its internal management cannot be disclosed.

Mr. SPEAKER.—That is the answer.

Sri B. HUTCHE GOWDA.—But under the Labour Act Government is responsible. ಸರ್ಕಾರದವರು ಕೆಲಸದಲ್ಲಿದ್ದ ಲೇಬರರ್ಸ್‌ನ್ನು ಕೆಲಸದಿಂದ ತೆಗೆದುಹಾಕಿದ ಮೇಲೆ ಪುನಃ ಅವಕಾಶ ಬಿಟ್ಟಾಗ ಅವರನ್ನೇ ಕೆಲಸಕ್ಕೆ ನೇಮಿಸಿಕೊಳ್ಳಬೇಕೆಂದು ಲೇಬರ್ ಆಕ್ಟ್‌ನಲ್ಲಿ ತಿಳಿಸಿಲ್ಲವೇ ?

Sri H. SIDDAVEERAPPA.—I have already answered.

Sri D. VENKATESH.—Will the Government consider the question of filling up vacancies from those persons whenever there are vacancies?

Sri H. SIDDAVEERAPPA.—I will examine it—how far and to what extent the Government can interfere.

Collection of metal on Bangalore-Honnavar Road.

Q.—86. Sri N. HUCHMASTHY GOWDA (Kunigal Taluk).—

Will the Government be pleased to state :—

(*a*) the quantity of metal that has been collected on the Bangalore-Honnavar Road from the 20th mile up to the boundry of Bangalore-Tumkur District ;

(*b*) the year in which it was collected ;

(*c*) how much of it has been spent ;

(*d*) whether Government have paid the money for this metal ?

Sri KADIDAL MANJAPPA (Minister for Revenue and Public Works).—

(*a*) 52,368 cubic yards.
(*b*) During the years 1944-48.
(*c*) 46,537 cubic yards.
(*d*) Yes.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಈ ರಸ್ತೆಯಲ್ಲಿ 52,368 ಘನ ಗಜ ಜಲ್ಲಿಯನ್ನು ಯಾವ ಉದ್ದೇಶದಿಂದ ತಾವು ಶೇಖರಣೆ ಮಾಡಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಕಾರ್ಪೆಟ್ ರಸ್ತೆ ಮಾಡಿಸುವುದಕ್ಕಾಗಿ 1944-45 ರಲ್ಲಿ ಶೇಖರಣೆ ಮಾಡಲಾಗಿತ್ತು.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ತಾವು 1944-45ರಲ್ಲಿ ರಸ್ತೆ ಮಾಡಿಸಲು ಶೇಖರಣೆ ಮಾಡಲಾಗಿತ್ತೆಂದು ಹೇಳುತ್ತೀರಿ. ಹಾಗಾದರೆ ಈಗ ಆ ರಸ್ತೆ ಮಾಡಿಸುವುದನ್ನು ಕೈಬಿಡಲಾಗಿರುತ್ತದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಹಾಗಾದರೆ ಅಷ್ಟು ಜಲ್ಲಿಯನ್ನು ತಾವು ಏತಕ್ಕೆ ಉಪಯೋಗ ಮಾಡಿದಿರಿ ?

ಶ್ರೀ ಕಡಿದಾಳ್ ಮಂಜಪ್ಪ.—46,537 ಕ್ಯುಬಿಕ್ ಯಾರ್ಡ್‌ನ್ನು ಸಿಮೆಂಟ್ ಕಾರ್ಪೆಟ್ ರಸ್ತೆ ಮಾಡಿಸುವುದಕ್ಕಾಗಿ ಉಪಯೋಗಮಾಡಲಾಯಿತು. 51 ಸಾವಿರ ಕ್ಯುಬಿಕ್ ಯಾರ್ಡ್‌ನ್ನು ಆ ಸ್ಥಾಲ್ಪಂಗಿಗೆ ಉಪಯೋಗಿಸಲಾಯಿತು.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಬೆಂಗಳೂರು-ತುಮಕೂರು ರಸ್ತೆಯ 20 ನೆಯ ಮೈಲಿ ಕಲ್ಲಿನ ಬಳಿ, ಆ ಗಡಿ ಹತ್ತಿರ ಆ ರಸ್ತೆಗೆ ಸಿಮೆಂಟ್ ಕಾರ್ಪೆಟ್ ಮಾಡಿಸಿಲ್ಲ. ಹಾಗಿದ್ದರೆ ಆ ಜಲ್ಲಿಯನ್ನು ಏತಕ್ಕಾಗಿ ಉಪಯೋಗಿಸಿದಿರಿ ?

ಶ್ರೀ ಕಡಿದಾಳ್ ಮಂಜಪ್ಪ. ಸಿಮೆಂಟ್ ತಯಾರು ಮಾಡಿಸುವುದಕ್ಕೂ ಮತ್ತು ಜಲ್ಲಿ ಕೆಲಸಕ್ಕೂ ಉಪಯೋಗ ಮಾಡಲಾಯಿತು.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಆ ಜಲ್ಲಯನ್ನು ಏನುಮಾಡಿದ್ದಾರೆಂಬ ವಿಚಾರ ನನಗೆ ಗೊತ್ತಿದೆ. ಅದನ್ನು ಏತಕ್ಕೂ ಉಪಯೋಗಿಸಿಲ್ಲ. ಆದರೆ ತಾವೀಗ ನನಗೆ ಹೇಳುತ್ತಿರುವ ಉತ್ತರ ತಮಗೆ ತಮ್ಮ ಕ್ಲರ್ಕಳಿಗಿನ ಅಧಿಕಾರಿಗಳು ಏನು ಬರೆದುಕಳುಹಿಸಿದ್ದಾರೋ ಅದನ್ನು ತಾನೆ ತಾವೀಗ ಹೇಳುತ್ತಿರುವುದು !

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ಏತಕ್ಕೆ ಉಪಯೋಗ ಮಾಡಿದ್ದಾರೆಂಬ ವಿವರಗಳು ನನಗೆ ತಿಳಿಯದು. ಅಂತು ಅದನ್ನು ಕೆಲಸಕ್ಕೆ ಉಪಯೋಗ ಮಾಡಿದ್ದಾರೆಂಬುದು ಗೊತ್ತಿದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ನಾನು ಈ ಒಂದು ಪ್ರಶ್ನೆಯನ್ನು ಈ ಸಭೆಯ ಕಾರ್ಯಕಲಾಪಗಳಲ್ಲಿ ಸೇರಿಸತಕ್ಕ ಬಗ್ಗೆ ಕಳುಹಿಸಿದ್ದರ ಮೇರೆ ತಾವು ಅದನ್ನು ಅವರಿಗೆ ವಿವರಗಳನ್ನೊದಗಿಸುವುದಕ್ಕಾಗಿ ಕಳುಹಿಸಿದ್ದರ ಮೇರೆ ಅವರು ಅವರ ರಿಜಿಸ್ತರುಗಳಲ್ಲಿರತಕ್ಕ ಅಂಕೀ ಅಂಶಗಳ ಆಧಾರದ ಮೇರೆ ತಮಗೊಂದು ಸಮಜಾಯಿಷಿ ಬರೆದುಕಳುಹಿಸಿದ್ದರ ಮೇರೆಗೆ ತಾವೀಗ ಉತ್ತರ ಕೊಡುತ್ತಿದ್ದೀರೆಂದರೆ ತಾವು ಒಪ್ಪುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಹೆಚ್ಚಿನ ವಿವರಗಳು ತಿಳಿಯದು. ಅಂತೂ 5,831 ಘನ ಗಜ ಉಳಿದಿವೆಯೆಂದು ತಿಳಿದುಬಂದಿದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಈ ದಿವಸ ಅಲ್ಲಿ ಯಾವ ಜಲ್ಲಿ ಉಳಿದಿರುತ್ತೆಂದು ತಮಗೆ ಅವರು ತಿಳಿಸಿದ್ದಾರೋ ಅದು ಅಲ್ಲೆಲ್ಲಾ ಚಿಲ್ಲಾಪಲ್ಲಿಯಾಗಿ ಬದ್ದು ಹೋಗಿದೆ, ಅಲ್ಲಿ ಯಾವ ಜಲ್ಲಿಯೂ ಇಲ್ಲ ಎಂಬುದನ್ನು ಸರಿಯಾಗಿ ತಾವು ಕಣ್ಣುಬಿಟ್ಟು ನೋಡಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಕಣ್ಣುಬಿಟ್ಟು ನೋಡಿಯೇ ಅವರೂ ವರದಿ ಮಾಡಿರುವುದು.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—1948 ರಿಂದ ಆಚೆಗೆ ಅಳತೆಮಾಡಿದ ವರದಿ ತಮಗೆ ಬಂದಿದೆಯೋ ಅಥವಾ ಅದಕ್ಕಿಂತಲೂ ಈಚೆಗೆ ಅಳತೆಮಾಡಿದ ವಿವರಗಳು ತಮ್ಮಲ್ಲಿರುತ್ತವೆಯೋ !

ಶ್ರೀ ಕಡಿದಾಳ್ ಮಂಜಪ್ಪ.—ಇತ್ತೀಚೆಗೆ ಅಳತೆ ಮಾಡಿ ವರದಿ ಕಳುಹಿಸಿದ್ದಾರೆ.

9 A.M.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಆ ದಾರಿಯಲ್ಲಿ ಈಗ ಹೋಗಿ ನೋಡಿದರೆ, ಅಲ್ಲಿ ಜಲ್ಲಿ ಯಾವ ರೀತಿ ಇದೆ, ಚಿಲ್ಲಾಪಲ್ಲಿ ಹಾಗಿದೆಯೋ ಅಥವಾ ಸರಿಯಾಗಿದೆಯೋ ಎಂಬುದು ಗೊತ್ತಾಗುತ್ತಿತ್ತು. ಅಳತೆ ಮಾಡುವುದಕ್ಕೆ ಕೂಡ ಸಾಧ್ಯವಿಲ್ಲ. ಆದ್ದರಿಂದ, ಪುಸ್ತಕದಲ್ಲಿರತಕ್ಕ ಅಂಕಿ ಅಂಶಗಳನ್ನು ಓದಗಿಸಿದ್ದರೆ ಎಷ್ಟು Waste ಆಗಿದೆಯೆಂಬುದು ತಿಳಿಯುತ್ತಿತ್ತು. ಸೂಕ್ತವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಈ ಪ್ರಶ್ನೆ ಕಳುಹಿಸಿದ್ದು.

ಶ್ರೀ ಕಡಿದಾಳ್ ಮಂಜಪ್ಪ.—ವಿಚಾರಿಸುತ್ತೇನೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಇಲ್ಲಿ ತಾವು ಲೆಕ್ಕ ಹಾಕಿ 46,537 ಘನ ಗಜಗಳಷ್ಟು ಖರ್ಚಾಗಿದೆಯೆಂದು ಹೇಳಿದ್ದೀರಿ. ಎಲ್ಲಿಯವರೆಗೆ ಇಷ್ಟು ಖರ್ಚಾಗಿದ್ದುದು ?

ಶ್ರೀ ಕಡದಾಳ್ ಮಂಜಪ್ಪ.—52,368 ಘನ ಗಜಗಳಿದ್ದುದರಲ್ಲಿ 1948ನೆಯ ಇಸವಿಯಿಂದೀಚೆಗೆ ಖರ್ಚಾಗಿರುವುದು 46,537 ಘನ ಗಜಗಳು.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—46,537 ಘನ ಗಜಗಳು ಖರ್ಚಾದ ಮೇರೆ ಉಳಿದ ಜಲ್ಲಿಯನ್ನು ಅಲ್ಲೇಕೆ ಇಟ್ಟಿದ್ದೀರಿ

ಶ್ರೀ ಕಡಿದಾಳ್ ಮಂಜಪ್ಪ.—ರಸ್ತೆಯ ಉಪಯೋಗಕ್ಕೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಸಿಮೆಂಟ್ ಕಾಂಕ್ರೀಟ್ ಮಾಡುವ ಯೋಚನೆಯೇ ಇಲ್ಲದಿರುವಾಗ ಆ ಜಲ್ಲಿ ಅಲ್ಲೆಲ್ಲಿಕರಿಬೇಕು ?

ಶ್ರೀ ಕಡಿದಾಳ್ ಮಂಜಪ್ಪ.—ಕ್ರಮೇಣ ಎರ್ನಾಡಿಸ್ಟಿಕ್ಟ್ ಹೆಡ್‌ಕ್ವಾರ್ಟರುಗಳಿಂದಲೂ ಬೆಂಗಳೂರಿಗೆ ಬರತಕ್ಕ ರಸ್ತೆಗಳನ್ನು ಸಿಮೆಂಟ್ ಕಾಂಕ್ರೀಟ್ ಮಾಡಬೇಕೆಂದಿದ್ದೇವೆ. ಅದಕ್ಕೆ ಉಪಯೋಗಿಸುತ್ತೇವೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಈಗಿರುವ ಆಸ್ ಫಾರ್ಟ್ ರಸ್ತೆಯನ್ನು ಕಿತ್ತುಹಾಕಿ ಅದನ್ನು ಕಾಂಕ್ರೀಟ್ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ, ಇಲ್ಲ. ಚೆನ್ನಾಗಿದ್ದರೆ ಕಿತ್ತುಹಾಕುವುದಿಲ್ಲ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಹಾಗಾದರೆ, ಈಗ ಆದರೂ ಅದನ್ನು ಬೇರೆ ಕಡೆಗೆ ವರ್ಗಾಯಿಸಿ ಉಪಯೋಗ ಮಾಡುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಆಗಲಿ, ಮಾಡಿಸೋಣ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಈ ಜಲ್ಲಿಯನ್ನು ಖಾಸಗಿ ಜನರು ಯಾರೂ ಉಪಯೋಗಿಸಿಕೊಂಡಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಉಪಯೋಗಿಸಿಕೊಂಡಿಲ್ಲ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಈ ಜಲ್ಲಿಯನ್ನು ತಿರುಗಿ ಖರ್ಚು ಮಾಡುವಾಗ ಅಳತೆಮಾಡಿಸಿ ಉಪಯೋಗಮಾಡುವುದಕ್ಕೆ ಪ್ರಾರಂಭಿಸುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಅಳತೆ ಮಾಡಿಸುತ್ತೇವೆ.

ಶ್ರೀ ಬಿ. ಹುಚ್ಚೇಗೌಡ.—Curb Stones ಅಲ್ಲಲ್ಲಿ ಕೂಡಿಹಾಕಿದ್ದರಲ್ಲಿ ಶೇಕಡ 75 ಭಾಗ ಗೈರ್‌ವಿಲೆಯಾಗಿರುವುದು ತಮಗೆ ಗೊತ್ತಿದೆಯೇ ?

ಶ್ರೀ ಕಡದಾಳ್ ಮಂಜಪ್ಪ.—ಗೊತ್ತಿಲ್ಲ.

Water Supply to Devanahalli.

Q.—419. Sri R. MUNISWAMIAH (Bangalore North—Scheduled Castes).—

Will the Government be pleased to state :—

(*a*) the estimated amount for sinking wells in the Devanahalli Town for providing tap water in the town ;

(*b*) the amount of loan granted to Devanahalli Municipality for purposes of supplying drinking water ?

A.—Sri KADIDAL MANJAPPA (Minister for Revenue and Public Works).—

(*a*) Rs. 1,25,000.

(*b*) The question is under consideration.